O.S.No. 339/2015 P W - 2

ದಿನಾಂಕ 19.06.2024 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು ಃ ಪ್ರತಿವಾದಿ ಪರ ಶ್ರೀ.A.C.C. ವಕೀಲರಿಂದ ಃ

1973 ರ ಕ್ರಯಪತ್ರದಲ್ಲಿ 1 ನೇ ವಾದಿಯು ಕ್ರಯಕ್ಕೆ ಪಡೆದ ಸ್ವತ್ತಿನ ಖಾನೇಷುಮಾರಿ ನಂಬರ್ ನನಗೆ ಗೊತ್ತಿಲ್ಲ. ವಾದಿಯ ಮಗ ಮತ್ತು ನಾನು ಸ್ನೇಹಿತರು ಎಂದರೆ ಸರಿಯಲ್ಲ, ನಾವು ಒಂದೇ ಊರಿನವರು. ದಾವಾ ಸ್ವತ್ತಿನ ಉತ್ತರಕ್ಕೆ ವಾದಿ ಮತ್ತು ಪ್ರತಿವಾದಿ ಇಬ್ಬರಿಗೂ ಸೇರಿದ ಸ್ವತ್ತು ಇದೆ ಎಂದರೆ ಸರಿ. ಪ್ರತಿವಾದಿ ಒಂದೂವರೆ ಅಡಿ ಜಾಗ ಬಿಡಲು ತಡವಾದ ಕಾರಣ ವಾದಿ ಈ ದಾವೆಯನ್ನು ಹಾಕಿದ್ದಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ವಾದಿಯು ರೇಷ್ಮೆ ಹುಳು ಸಾಗಾಣಿಕೆಗೆ ಮನೆಯನ್ನು ಕಟ್ಟಿದ್ದಾರೆ ಎಂದರೆ ಸರಿ. ದಾವಾ ಸ್ವತ್ತಿನ ಉತ್ತರಕ್ಕೆ ಹಿಂದೆ ಭೈರೇಗೌಡರ ಮನೆ ಮತ್ತು ಹಿತ್ತಲು ಇತ್ತು ಎಂದರೆ ಸರಿ. ದಾವಾ ಸ್ವತ್ತಿನ ಉತ್ತರಕ್ಕೆ ಇರುವ ಭೈರೇಗೌಡರ ಸ್ವತ್ತನ್ನು ದಿನಾಂಕ 14.09.1987 ರಂದು ಪ್ರತಿವಾದಿಯು ಖರೀದಿಸಿದ್ದಾರೆ ಎಂದರೆ ಸರಿ. ಸದರಿ ಸ್ವತ್ತು 24*61 ವರೆ ಅಡಿ ಇದ್ದು ಸದರಿ ಸ್ವತ್ತಿನಲ್ಲಿ ನಾಟಿ ಹೆಂಚಿನ ಮನೆ ಇತ್ತು, ಅದು ಈಗ ಶಿಥಿಲಗೊಂಡಿದೆ ಎಂದರೆ ಸರಿ. ಸದರಿ ಸ್ವತ್ತಿನಲ್ಲಿ ಈಗ ಪ್ರತಿವಾದಿ ಇಲ್ಲ ಎಂದರೆ ಸಾಕ್ಷಿ ಅವರ ಸೊಸೆ ಇದ್ದಾರೆ ಎಂದು ನುಡಿಯುತ್ತಾರೆ. ಸದರಿ ಸ್ವತ್ತಿನ ಹಿತ್ತಲು 24*18 ಅಡಿ ಇತ್ತು ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿಯು ಉತ್ತರ ದಕ್ಷಿಣ 79 ವರೆ ಅಡಿ ಜಾಗದಲ್ಲಿ 73 ವರೆ ಅಡಿಗೆ ಬೇಲಿ ಹಾಕಿದ್ದಾರೆ ಎಂದರೆ ಸರಿ. ಉಳಿದ 6 ಅಡಿ ಜಾಗವನ್ನು ವಾದಿ ಒತ್ತುವರಿ ಮಾಡಿಕೊಂಡಿದ್ದು, ಅದನ್ನು ಬಿಡಿಸಿಕೊಳ್ಳಲು ವಾದಿ ಈ ದಾವೆ ಹಾಕಿದ್ದಾರೆ ಎಂದರೆ ಸರಿಯಲ್ಲ.

ದಾವಾ ಸ್ವತ್ತಿನ ಉತ್ತರಕ್ಕೆ 24*18 ಅಡಿ ಜಾಗ ಬಿಟ್ಟು ಪ್ರತಿವಾದಿ ತಳಪಾಯ ಹಾಕಿದ್ದಾರೆ ಎಂದರೆ ಸರಿ. ತಳಪಾಯ ಹಾಕಿದ ಒಂದು ವರ್ಷದ ನಂತರ ಈ ದಾವೆ ಹಾಕಲಾಯಿತು ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. 61 ವರೆ ಮನೆ ಇದ್ದ ಜಾಗದಲ್ಲಿ 31 ವರೆ ಅಡಿ ಜಾಗವನ್ನು ಕೆಡವಿ ಅಲ್ಲಿ ತಳಪಾಯ ಹಾಕಿದ್ದಾರೆ ಎಂದರೆ

ಸಾಕ್ಷಿ ಎಷ್ಟು ಅಡಿ ಎಂದು ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನ ಅಕ್ಕ ಪಕ್ಕದಲ್ಲಿ ನನಗೆ ಸೇರಿದ ಯಾವುದೇ ಸ್ವತ್ತು ಇಲ್ಲ. ಸದರಿ ದಾವಾ ಸ್ವತ್ತಿಗೆ ಹೋಗುವ ರಸ್ತೆಯಲ್ಲೂ ಸಹ ನನ್ನ ಮನೆ ಇಲ್ಲ. ವಾದಿ ಮತ್ತು ಪ್ರತಿವಾದಿಯರ ನಡುವೆ ನಡೆದ ಪಂಚಾಯಿತಿಯಲ್ಲಿ ನಾನು ಸಹ ಭಾಗವಹಿಸಿದ್ದೆ. ಪಂಚಾಯಿತಿಯಲ್ಲಿ ವಾದಿ ಪ್ರತಿವಾದಿಯರು ವಾವಾ ಸ್ವತ್ತಿನ ಉತ್ತರಕ್ಕೆ ಇರುವ ಜಾಗದಲ್ಲಿ ಒಂದೂವರೆ ಅಡಿ ಒಂದೂವರೆ ಅಡಿ ಜಾಗವನ್ನು ಬಿಟ್ಟು ಮನೆ ಕಟ್ಟಿಕೊಳ್ಳಲು ತೀರ್ಮಾನವಾಗಿತ್ತು ಎಂದರೆ ಸರಿ.

ಪ್ರತಿವಾದಿ ಮನೆ ಕೆಡವಲು ತಡವಾದ ಕಾರಣ ವಾದಿ ಈ ದಾವೆ ಹಾಕಿದ್ದಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ದಕ್ಷಿಣಕ್ಕೆ ವಾದಿಯವರದ್ದೇ ಆದ ಮನೆ ಇದೆ ಎಂದರೆ ಸರಿ. ದಾವಾ ಸ್ವತ್ತಿನ ದಕ್ಷಿಣಕ್ಕೆ ಜಾಗ ಇದೆ ಎಂದರೆ ಸರಿ. ವಾದಿಯರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿಗೆ ಸೇರಿದ ಜಾಗವನ್ನು ವಾದಿ ಕಬಳಿಸಿಕೊಳ್ಳಲು ಸಹಾಯ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ.

ಪ್ರತಿವಾದಿ ವಾದಿಯ ಜಮೀನಿನಲ್ಲಿ ಅಕ್ರಮ ಪ್ರವೇಶ ಮಾಡಿದ ದಿನಾಂಕ ಮತ್ತು ಸಮಯ ನನಗೆ ಗೊತ್ತಿಲ್ಲ. ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಹೇಳಿರುವ ಸರ್ವೆ ನಂ. 10/3 ವಿಸ್ತೀರ್ಣ 1 ಎಕರೆ 38 ಗುಂಟೆ ನನ್ನ ತಂದೆಯ ಹೆಸರಿನಲ್ಲಿದೆ. ಅದರಲ್ಲಿನ ಮನೆ ನನ್ನ ತಂದೆ ಹೆಸರಿನಲ್ಲಿದೆ. ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಮುಗಿಯಿತು.**

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)

ಓ ಹೇ ಕೇ ಸ ಒ

ಎರಡನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಕನಕಪುರ